# ದಿನಾಂಕ: 13-07-2010ರಂದು ಪೂರ್ವಾಹ್ನ: 11-00ಗಂಟೆಗೆ ಹೇಮಾವತಿ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು

## ಅಧ್ಯಕ್ಷತೆ: ಶ್ರೀಮತಿ ನಂಜಮ್ಮ ಉ: ಕಮಲಮ್ಮ

## ಅಧ್ಯಕ್ಷರು,

## ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ

ಹಾಜರಿ: 06

ಗೈರು ಹಾಜರಿ: 01

| ಕ್ರಸಂ | ವಿಷಯ | ಚರ್ಚೆ | ತೀರ್ಮಾನ |
|---|---|---|---|
| | | ಸಮಿತಿ ಕಾರ್ಯದರ್ಶಿಯವರಾದ ಉಪ ಕಾರ್ಯದರ್ಶಿ(ಅಭಿವೃದ್ಧಿ) ಇವರು ಸಭೆಯಲ್ಲಿ ಹಾಜರಿದದ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು, ಮುಖ್ಯ ಲೆಕ್ಕಾಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಯವರನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು. | |
| 1 | ಕೃಷಿ ಮತ್ತು ಕೈಗಾರಿಕೆ ಸ್ಥಾಯಿ ಸಮಿತಿ ಸಭೆಯ ವ್ಯಾಪ್ತಿಗೊಳಪಡುವ ಇಲಾಖೆಗಳ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಯೋವಿ(3)/ ಕೃಷಿ ಕೈಗಾರಿಕೆ ಕ್ರಿ.ಯೋ/ 60-71/2010-11 ದಿನಾಂಕ: 04-06-2010<br>ಯೋಜನಾ ಅಂದಾಜು ಮತ್ತು ಮೌಲ್ಯಮಾಪನ ಅಧಿಕಾರಿಯವರು 2010-11ನೇ ಸಾಲಿನಲ್ಲಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಗೊಳಪಡುವ ವಿವಿಧ ಇಲಾಖೆಗಳ ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ವಿವಿಧ ಲೆಕ್ಕಶೀರ್ಷಿಕೆಗಳಡಿಯಲ್ಲಿ ಲಿಂಕ್ ಪುಸ್ತಕದಲ್ಲಿ ನಿಗಧಿಯಾದ ಅನುದಾನದಂತೆ ಸಿದ್ದಪಡಿಸಲಾದ ಕ್ರಿಯಾ ಯೋಜನೆಯನ್ನು ಸಭೆಯ ಅನುಮೋದನೆಗೆ ಮಂಡಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ರಾಜಶೇಖರಪ್ಪರವರು ಮಾತನಾಡುತ್ತಾ, ಜಿಲ್ಲೆಯಲ್ಲಿ ರೈತರು ಶುಂಠಿ ಬೆಳೆಯನ್ನು ಬೆಳೆಯುತ್ತಿದ್ದು, ಖಾಸಗಿ ಔಷಧಿ ಸಂಸ್ಥೆಯವರು ರೈತರಿಗೆ ಬೇರೆ ಬೇರೆ ರೀತಿಯ ಔಷಧಿಗಳನ್ನು ಸಿಂಪರಣೆ ಮಾಡುವಂತೆ ತಪ್ಪು ಮಾಹಿತಿಯನ್ನು ನೀಡುತ್ತಿದ್ದು, ಇದರಿಂದ, ರೈತರಿಗೆ ಗೊಂದಲವುಂಟಾಗಿದೆ | ಸಭೆಯಲ್ಲಿ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವ ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ವ್ಯಾಪ್ತಿಗೊಳಪಡುವ ವಿವಿಧ ಇಲಾಖೆಗಳ ಲಿಂಕ್ ಪುಸ್ತಕದಲ್ಲಿ ನಿಗದಿಪಡಿಸಿದ ಅನುದಾನಕ್ಕೆ ಅನುಸಾರವಾಗಿ ಸಿದ್ದಪಡಿಸಿ ಸಲ್ಲಿಸಿರುವ ಕ್ರಿಯಾ ಯೋಜನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| | | ಮತ್ತು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ, ತೋಟಗಾರಿಕೆ ಇಲಾಖೆಯ ವತಿಯಿಂದ ಶುಂಠಿ ಬೆಳೆಗೆ ಯಾವ ಔಷಧಿಗಳನ್ನು ಸಿಂಪರಣೆ ಮಾಡಿದರೆ ಪರಿಣಾಮ ಕಾರಿಯಾಗಿರುತ್ತದೆ ಎಂಬ ಬಗ್ಗೆ ವ್ಯಾಪಕವಾಗಿ ಪ್ರಚಾರವನ್ನು ಮಾಡಲು ಕ್ರಮ ವಹಿಸಬೇಕೆಂದು ಕೋರಿದರು.<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡುತ್ತಾ, ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ತಗಲುವ ಕೊನೆಯ ಅಂಗಮಾರಿ ರೋಗ ನಿಯಂತ್ರಣಕ್ಕೆ ಸಂಬಂಧಿಸಿದಂತೆ, ರಚಿಸಿರುವ ತಂಡಗಳ ಮೂಲಕ, ಆಕಾಶವಾಣಿ ಮೂಲಕ ಮತ್ತು ಭಿತ್ತಿ ಪತ್ರಗಳ ಮೂಲಕ ಶುಂಠಿ ಬೆಳೆಗೆ ಔಷಧಿಗಳ ಸಿಂಪರಣೆ ಬಗ್ಗೆ ವ್ಯಾಪಕ ಪ್ರಚಾರ ನೀಡಿ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು ಮತ್ತು ತೆಂಗಿನ ಮರಗಳಿಗೆ ಬರುವ ಬೆಂಕಿ ರೋಗ, ಕಪ್ಪುತಲೆ ಹುಳ ಮತ್ತು ಕೆಂಪುಮೂತಿ ಹುಳಗಳ ನಿಯಂತ್ರಣದ ಬಗ್ಗೆಯೂ ಸಹ ರೈತರಿಗೆ ಅಗತ್ಯ ಮಾಹಿತಿ ನೀಡಿ ರೋಗಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ನನ್ನ ಕನಸಿನ ಗ್ರಾಮಾಭಿವೃದ್ಧಿ ಹೆಸರಿನಲ್ಲಿ ಗ್ರಾಮ ಪಂಚಾಯಿತಿಗಳ ಸಮಗ್ರ ಅಭಿವೃದ್ಧಿ ಪಡಿಸಲು ಜಿಲ್ಲೆಯಲ್ಲಿ ಒಟ್ಟು ಎಲ್ಲಾ ತಾಲ್ಲೂಕುಗಳಿಂದ 50 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರದಿಂದ ಮಂಜೂರಾಗುವ ಯೋಜನೆಗಳನ್ನು ಪರಿಣಾಮಕಾರಿ ಯಾಗಿ ಅನುಷ್ಠಾನ ಮಾಡಲು ಜಿಲ್ಲಾ ಮಟ್ಟದ ಒಬ್ಬೊಬ್ಬ ಅಧಿಕಾರಿಯವರಿಗೆ ತಲಾ ಒಂದು ಗ್ರಾಮ ಪಂಚಾಯಿತಿಯನ್ನು ದತ್ತು ಕೊಡಲಾಗುವುದು. ಅಲ್ಲದೆ, ಈ ಕಾರ್ಯಕ್ರಮವನ್ನು ಸ್ಥಳೀಯ ಜನ ಪ್ರತಿನಿಧಿಗಳು, ಸರ್ಕಾರೇತರ ಸಂಸ್ಥೆಯವರು, ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಗ್ರಾಮಗಳಲ್ಲಿರುವ ಪ್ರಭಾವಿ ವ್ಯಕ್ತಿಗಳ ಸಹಕಾರದೊಂದಿಗೆ ಜನರಿಗೆ ತಿಳುವಳಿಕೆಯನ್ನು ನೀಡಿ ಯೋಜನೆಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಮಾನ್ಯ ಜಿಲ್ಲಾ ಪಂಚಾಯಿತಿ ಸದಸ್ಯರುಗಳು ತಮ್ಮ ಸಹಕಾರವನ್ನು ನೀಡಬೇಕೆಂದು ಕೋರಿದರು. | |
| 2 | 2010-11ನೇ ಸಾಲಿನಲ್ಲಿ ಅನುಷ್ಠಾನಗೊಳಿಸುವ ಕಾರ್ಯ ಕ್ರಮಗಳ ವಿವಿಧ ಹಂತದ ಛಾಯಾಚಿತ್ರ ಮತ್ತು ಕಾಮಗಾರಿ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಸಾ.ಅರಣ್ಯ/ 2010-11 ದಿನಾಂಕ: 08-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>2010-11ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ವಿವಿಧ ಹಂತದ ಛಾಯಾಚಿತ್ರ ಮತ್ತು | ಸಭೆಯಲ್ಲಿ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು.<br>ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನರವರು ಕೋರಿರುವಂತೆ, |

| | | | |
|---|---|---|---|
| | ಗಳ ದಾಖಲಾತಿಗಳನ್ನು ಸೃಜಿಸಲು ಕ್ಯಾಮರಾ ಖರೀದಿಸುವ ಕುರಿತು. | ದಾಖಲಾತಿಗಳನ್ನು ಸೃಜಿಸಲು 7 ಕ್ಯಾಮರಾ ಖರೀದಿಸುವ ಕುರಿತು ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | 2010-11ನೇ ಸಾಲಿನಲ್ಲಿ 7 ಕ್ಯಾಮರಾಗಳನ್ನು ನಿಯಮಾನುಸಾರ ಖರೀದಿಸಲು ಅನುಮೋದನೆಯನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 3 | ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕಗಳಾದ ಡೆಕಾಲ್ ಕ್ಲೋರೋಫೆಕ್ಸ್, ಶುಚಿತ್ವಕ್ಕಾಗಿ, ಶುಚಿ ಹಾಸಿಗೆ ಸೋಂಕು ನಿವಾರಣಗಳಾದ ಲೆಬೆಕ್ಸ್ ವೆಟಕೇಟ್, ವಿಜೇತ ಸಪ್ಲಿಮೆಂಟ್ ಖರೀದಿಸಲು ರೂ.15,087,05.00 ಗಳಿಗೆ ಮಂಜೂರಾತಿ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ರೇಷ್ಮೆ/2010-11 ದಿನಾಂಕ: 08-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ರೇಷ್ಮೆ ಹುಳುಗಳಿಗೆ ತಗಲುವ ರೋಗಗಳ ನಿಯಂತ್ರಣಕ್ಕಾಗಿ ಸಾಮಾನ್ಯ ಸೋಂಕು ನಿವಾರಕಗಳಾದ ಡೆಕಾಲ್ ಕ್ಲೋರೋಫೆಕ್ಸ್, ಶುಚಿತ್ವಕ್ಕಾಗಿ, ಶುಚಿ ಹಾಸಿಗೆ ಸೋಂಕು ನಿವಾರಕಗಳಾದ ಲೆಬೆಕ್ಸ್ ವೆಟಕೇರ್ ವಿಜೇತ ಸಪ್ಲಿಮೆಂಟ್ ಖರೀದಿಸಲು ರೂ.15,08,705.00(ರೂಪಾಯಿ ಹದಿನೈದು ಲಕ್ಷದ ಎಂಟು ಸಾವಿರದ ಏಳು ನೂರ ಐದು ಮಾತ್ರ)ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಮಗ್ರವಾಗಿ ಪರಿಶೀಲಿಸಲಾಯಿತು.<br>ಉಪ ನಿರ್ದೇಶಕರು, ರೇಷ್ಮೆ ಇಲಾಖೆ, ಹಾಸನ ಇವರು ಕೋರಿರುವಂತೆ 2010-11ನೇ ಸಾಲಿಗೆ ಸಾಮಾನ್ಯ ಸೋಂಕು ನಿವಾರಕ/ಔಷಧಗಳಾದ ಡೆಕಾಲ್ ಕ್ಲೋರೋಫೆಕ್ಸ್, ಶುಚಿತ್ವಕ್ಕಾಗಿ, ಶುಚಿ ಹಾಸಿಗೆ ಸೋಂಕು ನಿವಾರಕಗಳಾದ ಲೆಬೆಕ್ಸ್ ವೆಟಕೇರ್ ವಿಜೇತ ಸಪ್ಲಿಮೆಂಟ್ ಖರೀದಿಸಲು ರೂ.15,08,705.00 (ರೂಪಾಯಿ ಹದಿನೈದು ಲಕ್ಷದ ಎಂಟು ಸಾವಿರದ ಏಳು ನೂರ ಐದು ಮಾತ್ರ)ಗಳಲ್ಲಿ 2009-10ನೇ ಸಾಲಿನಲ್ಲಿ ಅನುಮೋದಿತವಾಗಿರುವ ದರ ಮತ್ತು ಸರಬರಾಜು ಸಂಸ್ಥೆಗಳಲ್ಲಿ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಮಂಜೂರಾತಿ ನೀಡಿತು. |
| 5 | ಜಲಾನಯನ ಇಲಾಖೆಯ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಜಲಾನಯನ/2010-11 ದಿನಾಂಕ: 09-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಹಾಸನ ರವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ನೀಡುವಂತೆ ಕೋರಿರುತ್ತಾರೆ.<br>1. ಕಛೇರಿ ಬಳಕೆಗೆ ಸೋನಿ ಕಂಪನಿಯ ಒಂದು ಡಿಜಿಟಲ್ ಕ್ಯಾಮರಾ ಖರೀದಿಸಲು ಘಟನೋತ್ತರ ಮಂಜೂರಾತಿ ಬಗ್ಗೆ. ರೂ.25390.00 | ಸಭೆಯಲ್ಲಿ ಜಲಾನಯನ ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ವಿವರವಾಗಿ ಚರ್ಚಿಸ ಲಾಯಿತು.<br>ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ ಹಾಸನ ಇವರು ಕೋರಿರುವಂತೆ ಕೆಳಕಂಡ ಪ್ರಸ್ತಾವನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| | | 2. ಕಛೇರಿ ಬಳಕೆಗೆ ಎರಡು ಕ್ಯಾನನ್ ಕಂಪನಿಯ 2900 ಮಾದರಿಯ ಲೇಜರ್ ಜೆಟ್ ಪ್ರಿಂಟರ್ ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ ರೂ.14.352.00<br>3. DPAP ಮತ್ತು IWDP ಯೋಜನೆಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಬರುವ ಆರು ಪಶು ಚಿಕಿತ್ಸಾಲಯಗಳಿಗೆ ಪ್ರತಿಯೊಂದಕ್ಕೆ ರೂ.85,000.00ಗಳಲ್ಲಿ ಟ್ರೇವಿಸ್ ಷೆಲ್ಟರ್ ನಿರ್ಮಿಸುವುದು ರೂ.3,40000.00 | 1. ಕಛೇರಿ ಬಳಕೆಗೆ ಸೋನಿ ಕಂಪನಿಯ ಒಂದು ಡಿಜಿಟಲ್ ಕ್ಯಾಮರಾ ರೂ.25390.00 (ರೂಪಾಯಿ ಇಪ್ಪತ್ತೈದು ಸಾವಿರದ ಮುನ್ನೂರ ತೊಂಬತ್ತು ಮಾತ್ರ)ಗಳಲ್ಲಿ ನಿಯಮಾನುಸಾರ ಖರೀದಿಸಿರುವುದಕ್ಕೆ ಸಭೆಯಲ್ಲಿ ಸರ್ವಾನುಮತ ದಿಂದ ಘಟನೋತ್ತರ ಮಂಜೂರಾತಿ ನೀಡಲಾಯಿತು.<br>2. ಕಛೇರಿ ಬಳಕೆಗೆ ಎರಡು ಕ್ಯಾನನ್ ಕಂಪನಿಯ 2900 ಮಾದರಿಯ ಲೇಜರ್ ಜೆಟ್ ಪ್ರಿಂಟರ್ ರೂ.14,352.00 (ರೂಪಾಯಿ ಹದಿನಾಲ್ಕು ಸಾವಿರದ ಮುನ್ನೂರ ಐವತ್ತೆರಡು ಮಾತ್ರ) ಗಳಲ್ಲಿ ನಿಯಮಾನುಸಾರ ಖರೀದಿಸಲು ಅನುಮೋದನೆ ನೀಡಲಾಯಿತು.<br>3. DPAP ಮತ್ತು IWDP ಯೋಜನೆಗಳ ವ್ಯಾಪ್ತಿಯ ಗ್ರಾಮಗಳಲ್ಲಿ ಬರುವ ಅರಸೀಕೆರೆ ತಾಲ್ಲೂಕು, ನೇರ್ಲಿಗೆ, ಬೇಲೂರು ತಾಲ್ಲೂಕು ಬಿಕ್ಕೋಡು, ಹಾಸನ ತಾಲ್ಲೂಕು ದುಂಡನಾಯ್ಕನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು ಹಿರೀಸಾವೆ, ಹೊಳೆನರಸೀಪುರ ತಾಲ್ಲೂಕು ತಾತನಹಳ್ಳಿ, ಮತ್ತು ದೇವರ ಮುದ್ದನಹಳ್ಳಿ ಗ್ರಾಮಗಳ ಪಶು ಚಿಕಿತ್ಸಾಲಯಗಳಿಗೆ ಪ್ರತಿಯೊಂದಕ್ಕೆ ರೂ.85,000.00(ರೂಪಾಯಿ ಎಂಬತ್ತೈದು ಸಾವಿರ ಮಾತ್ರ)ಗಳಲ್ಲಿ ಟ್ರೇವಿಸ್ |

| | | | |
|---|---|---|---|
| | | | ಪೆಲ್ವರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ವತಿಯಿಂದ ನಿಯಮಾನುಸಾರ ನಿರ್ಮಿಸಲು ಅನುಮೋದನೆ ನೀಡಲಾಯಿತು. |
| 6 | ಪಶುಪಾಲನಾ ಇಲಾಖೆಯ ಪ್ರಸ್ತಾವನೆಗಳಿಗೆ ಅನು ಮೋದನೆ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ: ಜಿಪಂಹಾ/ಅಭಿ(3)ಪಶುಪಾಲನೆ /2010-11 ದಿನಾಂಕ: 08-07-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ರವರು ಕೆಳಕಂಡ ಪ್ರಸ್ತಾವನೆಗಳನ್ನು ಸಲ್ಲಿಸಿ ಅನುಮೋದನೆ ಕೋರಿರುತ್ತಾರೆ.<br>1. ವಿಸ್ತರಣಾ ಘಟಕ ಬಲಪಡಿಸುವುದು ಯೋಜನೆಯಡಿ ಕಾರ್ಯಾಗಾರ ಏರ್ಪಡಿಸುವ ಬಗ್ಗೆ ರೂ.90000.00<br>2. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ- ಆಡಳಿತ ಮಂಜೂರಾತಿ ನೀಡುವ ಬಗ್ಗೆ. ರೂ.997904.00<br>3. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಪಡವಳಲು ಹಾಗೂ ನಾರಾಯಣಪುರ ಗ್ರಾಮಗಳಲ್ಲಿ ಹೊಸದಾಗಿ ಪಶುಚಿಕಿತ್ಸಾಲಯ ಮಂಜೂರು ಮಾಡುವ ಬಗ್ಗೆ. | ಸಭೆಯಲ್ಲಿ ಪಶುಪಾಲನಾ ಇಲಾಖೆಯ ಪ್ರಸ್ತಾವನೆಗಳ ಬಗ್ಗೆ ವಿವರವಾಗಿ ಪರಿಶೀಲಿಸ ಲಾಯಿತು.<br>ಉಪ ನಿರ್ದೇಶಕರು, ಪಶುಪಾಲನಾ ಇಲಾಖೆ, ಹಾಸನ ಇವರು ಕೋರಿರುವಂತೆ ಕೆಳಕಂಡ ಪ್ರಸ್ತಾವನೆಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>1. ವಿಸ್ತರಣಾ ಘಟಕ ಬಲಪಡಿಸುವುದು ಯೋಜನೆ ಯಡಿ ರೂ.90000.00(ರೂಪಾಯಿ ತೊಂಬತ್ತು ಸಾವಿರ ಮಾತ್ರ) ಗಳಲ್ಲಿ ಕಾರ್ಯಾಗಾರ ಏರ್ಪಡಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br>2. ಆಸ್ಪತ್ರೆ ಮತ್ತು ಔಷಧಾಲಯಗಳು ಲೆಕ್ಕ ಶೀರ್ಷಿಕೆಯಡಿ ಜೀವರಕ್ಷಕ ಔಷಧಗಳ ಪೂರೈಕೆ ಯೋಜನೆಯಡಿ ರೂ.9,97,904.00 (ರೂಪಾಯಿ ಒಂಬತ್ತು ಲಕ್ಷದ ತೊಂಬತ್ತೇಳು ಸಾವಿರದ ಒಂಬೈನೂರ ನಾಲ್ಕು ಮಾತ್ರ)ಗಳಲ್ಲಿ ನಿಯಮಾನುಸಾರ ಖರೀದಿಸುವುದು.<br>3. ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಪಡವಳಲು ಹಾಗೂ ನಾರಾಯಣಪುರ ಗ್ರಾಮಗಳಲ್ಲಿ ಮತ್ತು ಅರಸೀಕೆರೆ ತಾಲ್ಲೂಕಿನ |

| | | | |
|---|---|---|---|
| | | | ಅರೆಕೆರೆ ಗ್ರಾಮದಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯ ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು** | | | |
| 1 | ಜೆ.ಹಿರೇಹಳ್ಳಿ ಸಸ್ಯ ಕ್ಷೇತ್ರದಲ್ಲಿ ಅನುಷ್ಠಾನ ಮಾಡಿರುವ ಕೊಳವೆ ಬಾವಿ ಕಾಮಗಾರಿಗೆ ಅನುಮೋದನೆ ನೀಡುವ ಬಗ್ಗೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಪ್ರಸ್ತಾಪ ಮಾಡುತ್ತಾ, ಚನ್ನರಾಯಪಟ್ಟಣ ತಾಲ್ಲೂಕು ಜೆ.ಹಿರೇಹಳ್ಳಿ ಗ್ರಾಮದಲ್ಲಿರುವ ಸಾಮಾಜಿಕ ಅರಣ್ಯ ವಿಭಾಗದ ಸಸ್ಯಕ್ಷೇತ್ರಕ್ಕೆ ಅವಶ್ಯವಿರುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕೊಳವೆ ಬಾವಿ ಕೊರೆದು ಮೋಟಾರ್ ಅಳವಡಿಸುವ ಕಾಮಗಾರಿಗೆ ಒಟ್ಟು ರೂ.1,06,769.00ಗಳು ವೆಚ್ಚವಾಗಿದ್ದು, ದಿನಾಂಕ: 16-02-2010ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯಲ್ಲಿ ರೂ.60000.00ಗಳಿಗೆ ಅನುಮೋದನೆಯನ್ನು ನೀಡಿದ್ದು, ಉಳಿಕೆ ಅನುದಾನ ರೂ.46,769.00ಗಳಿಗೆ ಅನುಮೋದನೆ ನೀಡಬೇಕೆಂದು ಕೋರಿದರು. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೋರಿರುವಂತೆ ಚನ್ನರಾಯಪಟ್ಟಣ ತಾಲ್ಲೂಕು ಜೆ.ಹಿರೇಹಳ್ಳಿ ಗ್ರಾಮದಲ್ಲಿರುವ ಸಾಮಾಜಿಕ ಅರಣ್ಯ ವಿಭಾಗದ ಸಸ್ಯಕ್ಷೇತ್ರಕ್ಕೆ ಅವಶ್ಯವಿರುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಲು ಕೊಳವೆ ಬಾವಿ ಮತ್ತು ಮೋಟಾರು ಅಳವಡಿಸಿದ ಕಾಮಗಾರಿಗೆ ಉಳಿಕೆ ಅನುದಾನ ರೂ.46,769.00(ರೂಪಾಯಿ ನಲವತ್ತು ಸಾವಿರದ ಏಳು ನೂರ ಅರವತ್ತೊಂಬತ್ತು ಮಾತ್ರ)ಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 2 | ಸಾಮಾಜಿಕ ಅರಣ್ಯ ವಿಭಾಗ/ ಪ್ರಾದೇಶಿಕ ಅರಣ್ಯ ವಿಭಾಗದ ವತಿಯಿಂದ ಮಹಾತ್ಮ ಗಾಂಧಿ ರಾಷ್ಟ್ರೀಯಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಬೆಳೆಸಿರುವ ಸಸಿಗಳಲ್ಲಿ ಹೆಚ್ಚುವರಿಯಾಗಿ ಉಳಿಯುವ ಸಸಿಗಳನ್ನು | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಪ್ರಸ್ತಾಪ ಮಾಡುತ್ತಾ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗ ಮತ್ತು ಪ್ರಾದೇಶಿಕ ಅರಣ್ಯ ವಿಭಾಗದ ವತಿಯಿಂದ ವಿವಿಧ ಸಸಿಗಳನ್ನು ಬೆಳೆಸಲಾಗಿದ್ದು, ಗ್ರಾಮ ಪಂಚಾಯಿತಿಗಳಿಗೆ ಅವಶ್ಯವಿರುವ ಸಸಿಗಳನ್ನು ವಿತರಣೆ ಮಾಡಿ ಹೆಚ್ಚುವರಿಯಾಗಿ ಉಳಿಯುವ ಸಸಿಗಳನ್ನು ಖರೀದಿಸಲು ಇಚ್ಚಿಸುವ ರೈತರಿಗೆ ಸರ್ಕಾರ ನಿಗದಿಪಡಿಸಿರುವ ದರದಂತೆ ಮಾರಾಟ ಮಾಡಲು ಸಭೆಯು ಅನುಮತಿ ನೀಡಬೇಕೆಂದು ಕೋರಿದರು. | ಸಭೆಯಲ್ಲಿ ವಿವರವಾಗಿ ಚರ್ಚಿಸಿದ ನಂತರ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೋರಿರುವಂತೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸಾಮಾಜಿಕ ಅರಣ್ಯ ವಿಭಾಗ ಮತ್ತು ಪ್ರಾದೇಶಿಕ ಅರಣ್ಯ ವಿಭಾಗದ ವತಿಯಿಂದ ಬೆಳೆಸಲಾಗಿರುವ ವಿವಿಧ ಸಸಿಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ |

| | | | |
|---|---|---|---|
| | ಮಾರಾಟ ಮಾಡುವ ಬಗ್ಗೆ. | | ಅವಶ್ಯವಿರುವ ಸಸಿಗಳನ್ನು ವಿತರಣೆ ಮಾಡಿ ಹೆಚ್ಚುವರಿಯಾಗಿ ಉಳಿಯುವ ಸಸಿಗಳನ್ನು ಖರೀದಿಸಲು ಇಚ್ಚಿಸುವ ರೈತರಿಗೆ ಸರ್ಕಾರ ನಿಗದಿ ಪಡಿಸಿರುವ ದರದಂತೆ ಮಾರಾಟ ಮಾಡಲು ಸಭೆಯು ಸರ್ವಾನುಮತದಿಂದ ಅನುಮತಿ ನೀಡಿತು. |
| 3 | ಸಾಮಾಜಿಕ ಅರಣ್ಯ ವಿಭಾಗದ ಕಛೇರಿಗಳಿಗೆ ಫ್ಯಾಕ್ಸ್ ಮೆಷಿನ್ ಖರೀದಿ ಬಗ್ಗೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಪ್ರಸ್ತಾಪ ಮಾಡುತ್ತಾ, ಜಿಲ್ಲೆಯ ಅಧೀನ ಕಛೇರಿಗಳಿಗೆ ಫ್ಯಾಕ್ಸ್ ಯಂತ್ರಗಳ ಅಗತ್ಯವಿದ್ದು, ಪ್ರತಿ ಫ್ಯಾಕ್ಸ್ ಯಂತ್ರಕ್ಕೆ ರೂ.5,905.00ಗಳಂತೆ 6 ಫ್ಯಾಕ್ಸ್ ಯಂತ್ರಗಳನ್ನು ರೂ.35,430.00ಗಳಲ್ಲಿ ಖರೀದಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೋರಿರುವಂತೆ, ಅಧೀನ ಕಛೇರಿಗಳಿಗೆ ಅವಶ್ಯವಿರುವ ಪ್ಯಾನಾಸೋನಿಕ್ ಕೆ.ಎಕ್ಸ್- ಎಫ್-ಟಿ 981 ಫ್ಯಾಕ್ಸ್ ಮೆಷಿನ್ ಗಳನ್ನು ಪ್ರತಿ ಯಂತ್ರಕ್ಕೆ ರೂ.5,905.00ರಂತೆ 6 ಯಂತ್ರ ಗಳನ್ನು ಒಟ್ಟು ರೂ.35,430.00 (ರೂಪಾಯಿ ಮೂವತ್ತೈದು ಸಾವಿರದ ನಾಲ್ಕು ನೂರ ಮೂವತ್ತು ಮಾತ್ರ) ಗಳಲ್ಲಿ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| 4 | HP Desktop System with Core 2 Duo 2.93 ghz 2 GB Ram ಕಂಪ್ಯೂಟರ್ ಖರೀದಿಸುವ ಬಗ್ಗೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಪ್ರಸ್ತಾಪ ಮಾಡುತ್ತಾ, ಕಛೇರಿ ಕೆಲಸಗಳಿಗೆ ಅನುಕೂಲವಾಗುವಂತೆ HP Desktop System with Core 2 Duo 2.93 ghz 2 GB Ram ಇರುವ ಕಂಪ್ಯೂಟರ್ ಗಳನ್ನು ಪ್ರತಿ ಕಂಪ್ಯೂಟರಿಗೆ ರೂ.34,500.00ರಂತೆ 2 ಕಂಪ್ಯೂಟರ್ ಗಳನ್ನು ಖರೀದಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೋರಿರುವಂತೆ, ಕಛೇರಿ ಕೆಲಸಗಳಿಗೆ ಅನುಕೂಲವಾಗುವಂತೆ HP Desktop System with Core 2 Duo 2.93 ghz 2 GB Ram ಇರುವ ಕಂಪ್ಯೂಟರ್ ಗಳನ್ನು ಪ್ರತಿ ಕಂಪ್ಯೂಟರಿಗೆ ರೂ.34,500.00ರಂತೆ 2 ಕಂಪ್ಯೂಟರ್ ಗಳನ್ನು ರೂ. 69,000.00 (ರೂಪಾಯಿ ಅರವತ್ತೊಂಬತ್ತು ಸಾವಿರ ಮಾತ್ರ)ಗಳಲ್ಲಿ ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |

| | | | |
|---|---|---|---|
| 5 | ಟ್ಯಾಂಕರ್ ಖರೀದಿ ಬಗ್ಗೆ | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಪ್ರಸ್ತಾಪ ಮಾಡುತ್ತಾ, ಪ್ರಸಕ್ತ ಸಾಲಿನ ಲೆಕ್ಕಶೀರ್ಷಿಕೆ 2406-01-102-2-11 ರಲ್ಲಿ ಲಭ್ಯವಿರುವ ಅನುದಾನದಲ್ಲಿ ಜಾರ್ಜ್ ಟ್ರ್ಯಾಕ್ಟರ್ಸ್ ಗ್ಯಾರೇಜ್ & ಸ್ಪೇರ್ಸ್, ಹಾಸನ ಇವರಿಂದ ರೂ.50400.00ಗಳಲ್ಲಿ ಟ್ಯಾಂಕರ್ ಅನ್ನು ಖರೀದಿಸಲು ಅನುಮೋದನೆ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. | ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ವಿಭಾಗ, ಹಾಸನ ಇವರು ಕೋರಿರುವಂತೆ, ಪ್ರಸಕ್ತ ಸಾಲಿನ ಲೆಕ್ಕಶೀರ್ಷಿಕೆ 2406-01-102-2-11 ರಲ್ಲಿ ಲಭ್ಯವಿರುವ ಅನುದಾನದಲ್ಲಿ ಜಾರ್ಜ್ ಟ್ರ್ಯಾಕ್ಟರ್ಸ್ ಗ್ಯಾರೇಜ್ & ಸ್ಪೇರ್ಸ್, ಹಾಸನ ಇವರಿಂದ ರೂ.50400.00(ರೂಪಾಯಿ ಐವತ್ತು ಸಾವಿರದ ನಾಲ್ಕುನೂರು ಮಾತ್ರ)ಗಳಲ್ಲಿ ಟ್ಯಾಂಕರ್ ಅನ್ನು ನಿಯಮಾನುಸಾರ ಖರೀದಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. |
| | | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. | |

(ನಂಜಮ್ಮ ಉ: ಕಮಲಮ್ಮ),
ಅಧ್ಯಕ್ಷರು,
ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.